ಕರ್ನಾಟಕ ಸರ್ಕಾರ
ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆ
ವಾರ್ತಾ ಸೌಧ, ಸಂಖ್ಯೆ 17, ಭಗವಾನ್ ಮಹಾವೀರ ರಸ್ತೆ, ಬೆಂಗಳೂರು – 560 001.

ಸಂಖ್ಯೆ : ವಾಇ : ಉ ನಿ : ಸುಮಪ : 2016-17 ದಿನಾಂಕ: 27-02-2017

## ಪತ್ರಿಕಾ ಆಮಂತ್ರಣ

1. **ಡಾ . ಸರೋಜಿನಿ ಮಹಿಷಿ ವರದಿ ಅನುಷ್ಠಾನ, ನಾಮಫಲಕಗಳಲ್ಲಿ ತ್ರಿಭಾಷಾ ಸೂತ್ರ ಅಳವಡಿಕೆ ಕುರಿತಂತೆ ಪರಿಶೀಲಿಸಲು ಕನ್ನಡ ಅಭಿವೃದ್ಧಿ ಪ್ರಾಧಿಕಾರ, ವಾಣಿಜ್ಯ ಮತ್ತು ಕೈಗಾರಿಕಾ ಇಲಾಖೆ, ಕಾರ್ಮಿಕ ಇಲಾಖೆಯ ಅಧಿಕಾರಿಗಳು ಹಾಗೂ ಕನ್ನಡ ಸಂಘ ಹಾಗೂ ಕಾರ್ಮಿಕ ಮುಖಂಡರೊಂದಿಗೆ ಭೇಟಿ:**

**ದಿನಾಂಕ: 28–02–2017 ಮಂಗಳವಾರ :**

**ಬೆಳಿಗ್ಗೆ 11.00 ಗಂಟೆಗೆ ಸಿಂಡಿಕೇಟ್ ಬ್ಯಾಂಕ್ ಮುಖ್ಯ ಕಚೇರಿ, ಮಧ್ಯಾಹ್ನ 12.30 ಗಂಟೆಗೆ ಭಾರತೀಯ ಜೀವ ವಿಮಾ ನಿಗಮ ಮತ್ತು ಮಧ್ಯಾಹ್ನ 2.30 ಗಂಟೆಗೆ ನಬಾರ್ಡ್ ಮುಖ್ಯ ಕಚೇರಿಗಳಿಗೆ ಭೇಟಿ.**

**ವಿಶೇಷ ಸೂಚನೆ: ಪತ್ರಕರ್ತರನ್ನು ಈ ಕಾರ್ಯಕ್ರಮಕ್ಕೆ ಕರೆದುಕೊಂಡು ವಾಹನ ವ್ಯವಸ್ಥೆಯನ್ನು ಮಾಡಲಾಗಿದ್ದು ವಾಹನವು ಅಂದು ಬೆಳಿಗ್ಗೆ 10.30 ಗಂಟೆಗೆ ನಗರದ ಕಬ್ಬನ್ ಉದ್ಯಾನವನ ಸಮೀಪದಲ್ಲಿರುವ ಪ್ರೆಸ್ ಕ್ಲಬ್ ಆವರಣದಿಂದ ನಿಗದಿತ ಸ್ಥಳದತ್ತ ತೆರಳಲಿದೆ.**

## ಪತ್ರಿಕಾ ಪ್ರಕಟಣೆ

# ಮಹಿಳಾ ಪತ್ರಕರ್ತರ ಸಮಸ್ಯೆ-ಸವಾಲುಗಳು ಮತ್ತು ಅವಕಾಶಗಳು ಕುರಿತ ರಾಜ್ಯ ಮಟ್ಟದ ವಿಚಾರ ಸಂಕಿರಣ

**ಬೆಂಗಳೂರು, ಫೆಬ್ರವರಿ 27 , (ಕರ್ನಾಟಕ ವಾರ್ತೆ)**

**ಕರ್ನಾಟಕ ಮಾಧ್ಯಮ ಅಕಾಡೆಮಿಯು ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆ, ಮತ್ತು ವಿಜಯಪುರದ ಕರ್ನಾಟಕ ರಾಜ್ಯ ಮಹಿಳಾ ವಿಶ್ವವಿದ್ಯಾಲಯದ ಪತ್ರಿಕೋದ್ಯಮ ಮತ್ತು ಸಮೂಹ ಸಂವಹನ ವಿಭಾಗದ ಸಂಯುಕ್ತ ಆಶ್ರಯದಲ್ಲಿ ಮಾರ್ಚ್ 6**

ಮತ್ತು 7 ರಂದು ವಿಜಯಪುರ ಮಹಿಳಾ ವಿಶ್ವ ವಿದ್ಯಾನಿಲಯದ ಡಾ. ಬಿ. ಆರ್. ಅಂಬೇಡ್ಕರ್ ಸಭಾಭವನದಲ್ಲಿ "ಮಹಿಳಾ ಪತ್ರಕರ್ತರ ಸಮಸ್ಯೆ-ಸವಾಲುಗಳು ಮತ್ತು ಅವಕಾಶಗಳು ಕುರಿತ" ರಾಜ್ಯ ಮಟ್ಟದ ವಿಚಾರ ಸಂಕಿರಣವನ್ನು ಹಮ್ಮಿಕೊಂಡಿದೆ.

ವಿಜಯಪುರದ ಕರ್ನಾಟಕ ರಾಜ್ಯ ಮಹಿಳಾ ವಿಶ್ವವಿದ್ಯಾಲಯದ ಕುಲಪತಿ ಪ್ರೊ. ಸಬಿಹಾ ಅವರು ವಿಚಾರ ಸಂಕಿರಣವನ್ನು ಉದ್ಘಾಟಿಸಲಿದ್ದಾರೆ. ಖ್ಯಾತ ಪತ್ರಕರ್ತೆ ಹಾಗೂ ಹೈದರಾಬಾದ್‌ನ ಉಸ್ಮಾನಿಯಾ ವಿಶ್ವವಿದ್ಯಾಲಯದ ಪ್ರಾಧ್ಯಾಪಕರಾದ ಡಾ. ಆರ್. ಅಖಿಲೇಶ್ವರಿ ಅವರು ಪ್ರಧಾನ ಭಾಷಣ ಮಾಡುವರು. ಕರ್ನಾಟಕ ಮಾಧ್ಯಮ ಅಕಾಡೆಮಿಯ ಸದಸ್ಯರಾದ ರುದ್ರಣ್ಣ ಹರ್ತಿಕೋಟೆ, ರಂಗಣ್ಣ ಟಿ.ಎಸ್, ಜಿ. ವೆಂಕಟಸಿಂಗ್ ಹಾಗೂ ಕೆ. ಶಿವಕುಮಾರ್ ಅವರು ಈ ಕಾರ್ಯಕ್ರಮದಲ್ಲಿ ಭಾಗವಹಿಸುವರು. ಕಾರ್ಯಕ್ರಮದ ಅಧ್ಯಕ್ಷತೆಯನ್ನು ಕರ್ನಾಟಕ ಮಾಧ್ಯಮ ಅಕಾಡೆಮಿಯ ಅಧ್ಯಕ್ಷ ಎಂ. ಸಿದ್ದರಾಜು ಅವರು ವಹಿಸಲಿದ್ದಾರೆ.

ಮಧ್ಯಾಹ್ನ 2.30 ಗಂಟೆಗೆ ಮೂರು ಪ್ರತ್ಯೇಕ ತಂಡಗಳಲ್ಲಿ ಸಂವಾದ ಚರ್ಚೆ ನಡೆಯಲಿದೆ. ಸಂಜೆ 6.00 ಗಂಟೆಗೆ ವಿಜಯಪುರ ಆಡಳಿತ ವಿಭಾಗದ ಮುಂಭಾಗದ ಸಭಾಂಗಣದಲ್ಲಿ ಸಾಂಸ್ಕೃತಿಕ ಕಾರ್ಯಕ್ರಮ ಮತ್ತು ಕರ್ನಾಟಕ ಯಕ್ಷಗಾನ ಅಕಾಡೆಮಿ ಪ್ರಾಯೋಜಿತ ಮಹಿಳಾ ಯಕ್ಷಗಾನ ಪ್ರದರ್ಶನ ನಡೆಯಲಿದೆ.

ಮಾರ್ಚ್ 7 ರಂದು ಬೆಳಿಗ್ಗೆ 9-30 ಗಂಟೆಗೆ ಡಾ. ಬಿ.ಆರ್. ಅಂಬೇಡ್ಕರ್ ಸಭಾಭವನ, ಕರಾಮವಿವಿ, ವಿಜಯಪುರ ಕನ್ನಡ ಪತ್ರಿಕೋದ್ಯಮಕ್ಕೆ ನಂಜನಗೂಡು ತಿರುಮಲಾಂಬ ಕೊಡುಗೆ ಕುರಿತು ಹಿರಿಯ ಪತ್ರಕರ್ತೆ ಡಾ.ಆರ್. ಪೂರ್ಣಿಮಾ ಅವರಿಂದ ವಿಶೇಷ ಉಪನ್ಯಾಸ ನಡೆಯಲಿದೆ. ಅಂದು ಬೆಳಿಗ್ಗೆ 10.30 ರಿಂದ 12.30 ಗಂಟೆಯವರೆಗೆ ಮೂರೂ ತಂಡಗಳ ಪ್ರಮುಖರಿಂದ ವಿಷಯ ಮಂಡನೆ ಹಾಗೂ ಚರ್ಚೆ ಕಾರ್ಯಕ್ರಮ ನಡೆಯಲಿದೆ. ಮಧ್ಯಾಹ್ನ 1.00 ಗಂಟೆಗೆ ಸಮಾರೋಪ ಸಮಾರಂಭ ನಡೆಯಲಿದೆ.

ಎಂಆರ್‌ಎಂ:ಜಿಪಿಆರ್.

## ಸಾರ್ವಜನಿಕ ದೂರು ಸ್ವೀಕಾರ ಮತ್ತು ಅವರ ಕುಂದುಕೊರತೆ ನಿವಾರಿಸುವ 'ಜನಹಿತ' ಮೊಬೈಲ್ ಆಪ್‌ಗೆ ಚಾಲನೆ – ಈಶ್ವರ ಬಿ. ಖಂಡ್ರೆ

ಬೆಂಗಳೂರು, ಫೆಬ್ರವರಿ 27 , (ಕರ್ನಾಟಕ ವಾರ್ತೆ)

ಆನ್‌ಲೈನ್ ಮೂಲಕ ಸಾರ್ವಜನಿಕರ ದೂರುಗಳನ್ನು ದಾಖಲಿಸುವುದು ಹಾಗೂ ಕುಂದುಕೊರತೆಗಳ ನಿವಾರಣೆಗೆ ಸ್ವಯಂಚಾಲಿತ ತಂತ್ರಾಂಶವನ್ನು ನಗರದ ಎಲ್ಲಾ ಸ್ಥಳೀಯ ಸಂಸ್ಥೆಗಳಲ್ಲಿ ದೇಶದಲ್ಲೇ ಮೊದಲ ಬಾರಿಗೆ ಜಾರಿಗೆ ತಂದ ರಾಜ್ಯ ನಮ್ಮದಾಗಿದೆ ಎಂದು ಪೌರಾಡಳಿತ ಹಾಗೂ ಸಾರ್ವಜನಿಕ ಉದ್ದಿಮೆಗಳ ರಾಜ್ಯ ಸಚಿವ ಈಶ್ವರ ಬಿ. ಖಂಡ್ರೆ ಅವರು ತಿಳಿಸಿದರು.

ವಿಕಾಸಸೌಧದಲ್ಲಿ ಇಂದು ಸಿಟಿ ಮ್ಯಾನೇಜರ್ಸ್ ಅಸೋಸಿಯೇಷನ್ ಕರ್ನಾಟಕ, ಪೌರಾಡಳಿತ ನಿರ್ದೇಶನಾಲಯ ಮತ್ತು ಮುನ್ಸಿಪಾಲ್ ಡಾಟಾ ಸಂಸ್ಥೆ ಸಹಯೋಗದೊಂದಿಗೆ ಏರ್ಪಡಿಸಿದ್ದ ಕರ್ನಾಟಕ ಮುನ್ಸಿಪಲ್ ಡಾಟಾ ಸೊಸೈಟಿಯ ನಾಗರಿಕ ಕೇಂದ್ರಿತ ಸೇವೆಗಳ ಉದ್ಘಾಟನೆ ಹಾಗೂ ಪ್ರಶಸ್ತಿ ವಿತರಣಾ ಸಮಾರಂಭದ ಅಧ್ಯಕ್ಷತೆ ವಹಿಸಿ ಮಾತನಾಡಿದ ಸಚಿವರು ನಾಗರೀಕರ ದೂರು ಸ್ವೀಕಾರ ಸೇರಿದಂತೆ ಅವರ ಕುಂದುಕೊರತೆಗಳನ್ನು ಆನ್‌ಲೈನ್ ಮೂಲಕ ವಿಲೇವಾರಿ ಮಾಡುವ 'ಜನಹಿತ' ಮೊಬೈಲ್ ಆಪ್‌ನ್ನು ರಾಜ್ಯದ ಎಲ್ಲಾ ನಗರ, ಸ್ಥಳೀಯ ಸಂಸ್ಥೆಗಳಲ್ಲಿ ಜಾರಿಗೆ ತರಲಾಗಿದೆ ಎಂದರು ತಿಳಿಸಿದರು.

ಜನಹಿತ ಮೊಬೈಲ್ ಆಪ್ ಮೂಲಕ ಕಟ್ಟಡ ನಿರ್ಮಾಣ ಪರವಾನಗಿ, ಉದ್ದಿಮೆಗಳಿಗೆ ನೀಡುವ ಪರವಾನಗಿ, ವ್ಯಾಪಾರಕ್ಕೆ ಸಂಬಂಧಿಸಿದ ಪರವಾನಗಿ, ಇ– ಆಸ್ತಿ, ಹಾಗೂ ಜನನ ಮತ್ತು ಮರಣ ದಾಖಲೆಗಳ ನೊಂದಾವಣೆಯನ್ನು ಆನ್‌ಲೈನ್ ಮೂಲಕವೇ ಮಾಡಬಹುದಾಗಿದೆ ಎಂದ ಸಚಿವ ಈಶ್ವರ ಬಿ. ಖಂಡ್ರೆ ಅವರು ನಗರೀಕರಣ ಹೆಚ್ಚಿದಂತೆ ಮೂಲಭೂತ ಸೌಲಭ್ಯ ಸೇರಿದಂತೆ ಹಲವು ಸಮಸ್ಯೆಗಳು ನಗರ ಪ್ರದೇಶಗಳಲ್ಲಿ ಕಂಡು ಬರುತ್ತವೆ. ಅಧಿಕಾರಿಗಳು ಅತ್ಯುತ್ತಮ ಪದ್ಧತಿ ಅನುಸರಿಸುವ ಮೂಲಕ ಜನರ ಸಮಸ್ಯೆ ನಿವಾರಿಸಿ ಉತ್ತಮ ಸೌಲಭ್ಯಗಳನ್ನು ಕಲ್ಪಿಸಬೇಕು ಎಂದರು.

ನಗರೀಕರಣ ಹೆಚ್ಚಾದಂತೆ ನಗರಕ್ಕೆ ವಲಸೆ ಬರುವವರ ಸಂಖ್ಯೆಯಲ್ಲಿ ಹೆಚ್ಚಳ ಕಂಡು ಬಂದಿದ್ದು ಹಾಲಿ ನಗರ ವಾಸಿಗಳ ಸಂಖ್ಯೆ ಶೇ 38 ರಷ್ಟಿದ್ದು ಮುಂದಿನ ದಿನಗಳಲ್ಲಿ ಅದು ಶೇ 50 ರಷ್ಟಾಗಲಿದೆ ಎಂದು ಮೊಬೈಲ್ ಆಪ್‌ನ್ನು ಲೋಕಾರ್ಪಣೆ ಮಾಡಿ ಮಾತನಾಡಿದ ನಗರಾಭಿವೃದ್ಧಿ ಹಾಗೂ ಹಜ್ ಸಚಿವ ಆರ್. ರೋಷನ್ ಬೇಗ್ ಅವರು ನಗರ ಪ್ರದೇಶಗಳಲ್ಲಿನ ಜನಸಂಖ್ಯೆ ಹೆಚ್ಚಳವನ್ನು ಗಮನದಲ್ಲಿರಿಸಿ ರಸ್ತೆ, ಉತ್ತಮ ಕುಡಿಯುವ ನೀರು, ಒಳಚರಂಡಿ ವ್ಯವಸ್ಥೆಯಂತ ಮೂಲಭೂತ ಸೌಲಭ್ಯಗಳನ್ನು ಜನರಿಗೆ ಒದಗಿಸಬೇಕು ಎಂದರು.

ಆನ್‌ಲೈನ್ ಸೇವೆ ಮೂಲಕ ದೂರು ದಾಖಲಿಸುವುದರ ಜೊತೆಗೆ ದೂರವಾಣಿ ಕರೆಗಳಿಂದಲೂ ಜನರ ಸಮಸ್ಯೆಗಳನ್ನು ನೋಂದಾಯಿಸಿಕೊಂಡು ಅಧಿಕಾರಿಗಳು ಆ ಸಮಸ್ಯೆಗಳ ನಿವಾರಣೆಗೆ ತಕ್ಷಣ ಸ್ಪಂದಿಸಬೇಕು ಎಂದು ಸಚಿವ ಆರ್. ರೋಷನ್ ಬೇಗ್ ಅವರು ತಿಳಿಸಿದರು.

ಅತ್ಯುತ್ತಮ ಪದ್ಧತಿ ರೂಪಿಸಿ ಉತ್ತಮ ಆಡಳಿತ ನಡೆಸುತ್ತಿರುವ ಸ್ಥಳೀಯ ಸಂಸ್ಥೆಗಳಿಗೆ ಇದೇ ಸಂದರ್ಭದಲ್ಲಿ ಪ್ರಶಸ್ತಿ ವಿತರಿಸಲಾಯಿತು.

ನಗರಾಭಿವೃದ್ಧಿ ಇಲಾಖೆಯ ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿ ಮಹೇಂದ್ರ ಜೈನ್, ಬೃಹತ್ ಬೆಂಗಳೂರು ಮಹಾನಗರಪಾಲಿಕೆಯ ಆಯುಕ್ತ ಮಂಜುನಾಥ ಪ್ರಸಾದ್, ನಗರಾಭಿವೃದ್ಧಿ ಇಲಾಖೆಯ ಕಾರ್ಯದರ್ಶಿ ವಿ. ಪೊನ್ನುರಾಜ್ ಅವರು ಮಾತನಾಡಿದರು.

ಸಿಮ್ಯಾಕ್  ಮತ್ತು ಪೌರಾಡಳಿತ ನಿರ್ದೇಶನಾಲಯದ ನಿರ್ದೇಶಕ ಡಾ. ವಿಶಾಲ್, ಕರ್ನಾಟಕ ನಗರ ನೀರು ಸರಬರಾಜು ಮತ್ತು ಒಳಚರಂಡಿ ಮಂಡಳಿಯ ಡಾ. ಜೆ. ರವಿಶಂಕರ್ ಸೇರಿದಂತೆ ರಾಜ್ಯಾದ್ಯಂತ ಆಗಮಿಸಿದ್ದ ನಗರ ಹಾಗೂ ಸ್ಥಳೀಯ ಸಂಸ್ಥೆಗಳ ಅಧಿಕಾರಿಗಳು ಸಮಾರಂಭದಲ್ಲಿ ಹಾಜರಿದ್ದರು.

ಎಸ್‌ಎಂ:ಕೆಪಿಪಿ:ಜಿಪಿಆರ್

## ಗ್ರಾಮಾಂತರ ಪ್ರದೇಶಗಳಲ್ಲಿ ವಾಸಿಸುತ್ತಿರುವ ಪಡಿತರ ಕಾರ್ಡುದಾರರಿಗೆ ಒಂದರಿಂದ ಮೂರು ಲೀಟರ್‌ವರೆಗೆ ಸೀಮೆಎಣ್ಣೆ ಮುಂದಿನ ತಿಂಗಳಿಂದಲ್ಲೇ ವಿತರಣೆ – ಯು.ಟಿ. ಖಾದರ್

ಬೆಂಗಳೂರು, ಫೆಬ್ರವರಿ 27 , (ಕರ್ನಾಟಕ ವಾರ್ತೆ)

ರಾಜ್ಯದ ಗ್ರಾಮಾಂತರ ಪ್ರದೇಶಗಳಲ್ಲಿ ವಾಸಮಾಡುತ್ತಿರುವ ಬಿ.ಪಿ.ಎಲ್. ಅನಿಲ ಪಡಿತರ ಚೀಟಿ ಹೊಂದಿರುವ ಕಾರ್ಡುದಾರರಿಗೆ ಒಂದು ಲೀಟರ್ ಸೀಮೆ ಎಣ್ಣೆ ಹಾಗೂ ಅನಿಲ ಪಡಿತರ ಚೀಟಿ ಹೊಂದಿಲ್ಲದಿರುವ ಪಡಿತರದಾರರಿಗೆ ಮೂರು ಲೀಟರ್ ಸೀಮೆ ಎಣ್ಣೆಯನ್ನು ಮುಂದಿನ ತಿಂಗಳಿಂದಲೇ  ವಿತರಿಸುವ ಮಹತ್ವದ ತೀರ್ಮಾನವನ್ನು ಸರ್ಕಾರ ಕೈಗೊಂಡಿದೆ ಎಂದು ಆಹಾರ ಮತ್ತು ನಾಗರಿಕ ಸರಬರಾಜು ಸಚಿವ ಯು.ಟಿ. ಖಾದರ್ ಅವರು ಪ್ರಕಟಿಸಿದರು.

ವಿಕಾಸಸೌಧದ ತಮ್ಮ ಕಚೇರಿಯಲ್ಲಿ ಇಂದು ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಸಚಿವರು ಗ್ರಾಮಾಂತರ ಹಾಗೂ ಗುಡ್ಡಗಾಡು ಪ್ರದೇಶಗಳಲ್ಲಿ ವಾಸಮಾಡುತ್ತಿರುವ ಬಿ.ಪಿ.ಎಲ್. ಕಾರ್ಡುದಾರರಿಗೆ ಸೀಮೆಎಣ್ಣೆ ವಿತರಿಸುವ ಪ್ರಸ್ತಾಪಕ್ಕೆ ಮುಖ್ಯಮಂತ್ರಿ ಅವರು ಈಗಾಗಲೇ ಒಪ್ಪಿಗೆ ನೀಡಿದ್ದಾರೆ  ಸೀಮೆ ಎಣ್ಣೆಯು ಅಗತ್ಯವಿರುವ ಕಾರ್ಡುದಾರರು ತಮ್ಮ ಸಮೀಪವಿರುವ ಗ್ರಾಮ ಪಂಚಾಯಿತಿಗಳಲ್ಲಿ ತಮ್ಮ ಹೆಸರುಗಳನ್ನು ಮುಂದಿನ ತಿಂಗಳಿನಲ್ಲೇ ನೊಂದಾಯಿಸಿಕೊಳ್ಳಬೇಕು. ಹೀಗೆ ನೊಂದಾಯಿಸಿಕೊಂಡಲ್ಲಿ ರಾಜ್ಯಕ್ಕೆ ಯಾವ ಪ್ರಮಾಣದಲ್ಲಿ ಸೀಮೆಎಣ್ಣೆ ಅಗತ್ಯವಿದೆ ಎಂಬುದು ತಿಳಿಯುತ್ತದೆ ಎಂದು ವಿವರಿಸಿದರು.

ಈ ಸಾರಿ ಕೇಂದ್ರ ಸರ್ಕಾರ ಮಂಡಿಸಿದ ಆಯವ್ಯಯದಲ್ಲಿ ಸಕ್ಕರೆಗೆ ಅನುದಾನ ಒದಗಿಸಿಲ್ಲ ಎಂದ ಸಚಿವರು ಸಕ್ಕರೆಗೆ ಸಬ್ಸಿಡಿ ನೀಡುವಂತೆ ಕೋರಿ ಕೇಂದ್ರ ಸರ್ಕಾರಕ್ಕೆ ಪ್ರಸ್ತಾವನೆ ಸಲ್ಲಿಸುತ್ತೇವೆ.  ರಾಜ್ಯಕ್ಕೆ ಪ್ರತಿ ತಿಂಗಳು 10 ಸಾವಿರ ಮೆಟ್ರಿಕ್ ಟನ್ ಸಕ್ಕರೆ ಅಗತ್ಯ ಇದೆ.  ಈ ಹಿಂದೆ ಒಂದು ಕೆ.ಜಿ. ಸಕ್ಕರೆಗೆ ರೂ 18.50 ಸಬ್ಸಿಡಿ ಸಿಗುತ್ತಿತ್ತು ಎಂದರು.

ಎಸ್‌ಎಂ:ಕೆಪಿಪಿ:ಜಿಪಿಆರ್.

# ಸಚಿವ ಸಂಪುಟ ಸಭೆ

**ಬೆಂಗಳೂರು, ಫೆಬ್ರವರಿ 27, (ಕರ್ನಾಟಕ ವಾರ್ತೆ)**

**ಸಚಿವ ಸಂಪುಟದ 2017 ನೇ ಸಾಲಿನ 6 ನೇ ಸಭೆ ವಿಧಾನ ಸೌಧದ ಮೂರನೇ ಮಹಡಿಯಲ್ಲಿರುವ ಸಂಚಿವ ಸಂಪುಟ ಸಭಾ ಮಂದಿರದಲ್ಲಿ ಮಾರ್ಚ್ 1, 2017 ರಂದು ಬೆಳಿಗ್ಗೆ 11–00 ಗಂಟೆಗೆ ನಡೆಯಲಿದೆ ಎಂದು ಅಧಿಕೃತ ಪ್ರಕಟಣೆ ತಿಳಿಸಿದೆ.**

# ರಾಜ್ಯದಲ್ಲಿ ಏಪ್ರಿಲ್ 2 ಮತ್ತು 30 ರಂದು ಪಲ್ಸ್ ಪೋಲಿಯೋ

**ಬೆಂಗಳೂರು, ಫೆಬ್ರವರಿ 27, (ಕರ್ನಾಟಕ ವಾರ್ತೆ)**

**ಭಾರತ ಸರ್ಕಾರವು ಪ್ರತಿ ವರ್ಷದಂತೆ ಈ ವರ್ಷವೂ ಸಹ ಪಲ್ಸ್ ಪೋಲಿಯೋ ಲಸಿಕಾ ಕಾರ್ಯಕ್ರಮವನ್ನು ರಾಜ್ಯದಲ್ಲಿ ಹಮ್ಮಿಕೊಂಡಿದೆ.**

**ರಾಜ್ಯದಲ್ಲಿ ಏಪ್ರಿಲ್ 2, ಮತ್ತು 30 ರಂದು ಮೊದಲ ಮತ್ತು ಎರಡನೇ ಸುತ್ತಿನ ಪಲ್ಸ್ ಪೋಲಿಯೋ ಲಸಿಕಾ ಕಾರ್ಯಕ್ರಮ ನಡೆಯಲಿದೆ ಎಂದು ಯೋಜನಾ ನಿರ್ದೇಶಕರು(ಆರ್‌ಸಿಹೆಚ್) ಅವರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.**

# ಚಲನಚಿತ್ರ ಅಕಾಡೆಮಿಯ ವಾರ್ಷಿಕ ಪ್ರಶಸ್ತಿ ಪ್ರಕಟ

ಬೆಂಗಳೂರು, ಫೆಬ್ರವರಿ 27, (ಕರ್ನಾಟಕ ವಾರ್ತೆ)

ಕನ್ನಡದ ಮೊದಲ ಮಾತನಾಡುವ ಚಿತ್ರ 'ಸತಿ ಸುಲೋಚನ' (03.03.1934) ಬಿಡುಗಡೆಗೊಂಡ ಸವಿನೆನಪಿನಲ್ಲಿ ಕರ್ನಾಟಕ ಚಲಚಿತ್ರ ಅಕಾಡೆಮಿ ಕಳೆದ ವರ್ಷದಿಂದ 'ಕನ್ನಡ ವಾಕ್ಚಿತ್ರ ಹುಟ್ಟುಹಬ್ಬ' ಆಚರಿಸುತ್ತಾ ಬಂದಿದೆ. ಈ ಸಂದರ್ಭದಲ್ಲಿ ಕನ್ನಡ ಚಲಚಿತ್ರ ಅಭಿವೃದ್ಧಿಗಾಗಿ ಶ್ರಮಿಸಿದ ವಿವಿಧ ಕ್ಷೇತ್ರಗಳ ಗಣ್ಯರನ್ನು ಗುರುತಿಸಿ, ಅಂತಹ ಮಹನೀಯರಿಗೆ ಅಕಾಡೆಮಿಯ ವಾರ್ಷಿಕ ಪ್ರಶಸ್ತಿ ಪ್ರದಾನ ಮಾಡುವ ಪರಿಪಾಠವನ್ನು ಆರಂಭಿಸಲಾಗಿದೆ. ಕಳೆದ ವರ್ಷ ಹತ್ತು ಮಂದಿಯನ್ನು ಪ್ರಶಸ್ತಿಗೆ ಆರಿಸಲಾಗಿದ್ದರೆ, ಈ ಬಾರಿ ಹದಿನೈದು ಮಂದಿ ಸಾಧಕರನ್ನು ಗುರ್ತಿಸಲಾಗಿದೆ. ಪ್ರತಿ ಪ್ರಶಸ್ತಿಯನ್ನೂ ಆಯಾ ವಿಭಾಗದಲ್ಲಿ ಸಾಧನೆ ಮಾಡಿ, ಕನ್ನಡ ಚಿತ್ರೋದ್ಯಮದ ಅಭಿವೃದ್ಧಿಗಾಗಿ ಕಾಣಿಕೆ ನೀಡಿದ ಮಹನೀಯರ ಹೆಸರಿನಲ್ಲಿ ನೀಡುತ್ತಿರುವುದು ವಿಶೇಷವಾಗಿದೆ. ಪ್ರಶಸ್ತಿ ಪುರಸ್ಕೃತರಿಗೆ ತಲಾ 50,000 ರೂ ನಗದು ಬಹುಮಾನ ನೀಡಲಾಗುವುದಲ್ಲದೆ, ಸ್ಮರಣಿಕೆ ಹಾಗೂ ಪ್ರಶಸ್ತಿಪತ್ರ ನೀಡಿ ಸತ್ಕರಿಸಲಾಗುವುದು.

ಕರ್ನಾಟಕ ಚಲಚಿತ್ರ ಅಕಾಡೆಮಿ ಅಧ್ಯಕ್ಷರಾದ ಶ್ರೀ ಎಸ್.ವಿ.ರಾಜೇಂದ್ರಸಿಂಗ್ ಬಾಬು ಅವರ ಅಧ್ಯಕ್ಷತೆಯಲ್ಲಿ ಸಭೆ ಸೇರಿದ್ದ ಅಕಾಡೆಮಿ ಸದಸ್ಯ ಮಂಡಲಿ ಈ ಪ್ರಶಸ್ತಿಗಳನ್ನು ಅಂತಿಮಗೊಳಿಸಿದೆ.

ಬೆಂಗಳೂರಿನ ಸರ್ ಪುಟ್ಟಣ್ಣಚೆಟ್ಟಿ ಪುರಭವನದಲ್ಲಿ 2017ರ ಮಾರ್ಚ್ 3ರಂದು (ಶುಕ್ರವಾರ) ಸಂಜೆ 6 ಗಂಟೆಗೆ ಸಂಜೆ ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆ ಹಾಗೂ ಕರ್ನಾಟಕ ಚಲನಚಿತ್ರ ಅಕಾಡೆಮಿ ಏರ್ಪಡಿಸಿರುವ 'ಕನ್ನಡ ವಾಕ್ಚಿತ್ರ ಹುಟ್ಟುಹಬ್ಬ' ಸಮಾರಂಭದಲ್ಲಿ ವಸತಿ ಸಚಿವರಾದ ಶ್ರೀ ಎಂ.ಕೃಷ್ಣಪ್ಪ ಮತ್ತು ಹಿರಿಯ ಕಲಾವಿದರೂ ಹಾಗೂ ಮಾಜಿ ಸಚಿವರೂ ಆದ ಶ್ರೀ ಅಂಬರೀಷ್ ಅವರು ಪ್ರಶಸ್ತಿಗಳನ್ನು ಪ್ರದಾನ ಮಾಡುವರು. ಕನ್ನಡ ಮತ್ತು ಸಂಸ್ಕೃತಿ, ಮಹಿಳಾ ಮತ್ತು ಮಕ್ಕಳ ಕಲ್ಯಾಣ, ವಿಕಲ ಚೇತನರ ಮತ್ತು ಹಿರಿಯ ನಾಗರಿಕರ ಸಬಲೀಕರಣ ಇಲಾಖೇಯ ಸಚಿವರಾದ ಶ್ರೀಮತಿ ಉಮಾಶ್ರೀ ಕಾರ್ಯಕ್ರಮ ಉದ್ಘಾಟಿಸುವರು. ವಿಧಾನ ಪರಿಷತ್ ಸದಸ್ಯರಾದ ಡಾ.ಜಯಮಾಲ, ಹಿರಿಯ ಕಲಾವಿದೆ ಡಾ.ಭಾರತಿ ವಿಷ್ಣುವರ್ಧನ್, ಹಿರಿಯ ಕಲಾವಿದರಾದ ಶ್ರೀ ವಿ.ರವಿಚಂದ್ರನ್, ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆಯ ನಿರ್ದೇಶಕರಾದ ಶ್ರೀ ಎನ್.ಆರ್.ವಿಶುಕುಮಾರ್, ಕರ್ನಾಟಕ ಚಲನಚಿತ್ರ ವಾಣಿಜ್ಯ ಮಂಡಳಿ ಅಧ್ಯಕ್ಷರಾದ ಶ್ರೀ ಸಾ.ರಾ.ಗೋವಿಂದು ಮುಖ್ಯ ಅತಿಥಿಗಳಾಗಿರುತ್ತಾರೆ. ಕರ್ನಾಟಕ ಚಲಚಿತ್ರ ಅಕಾಡೆಮಿಯ ಅಧ್ಯಕ್ಷರಾದ ಶ್ರೀ ಎಸ್.ವಿ.ರಾಜೇಂದ್ರಸಿಂಗ್ ಬಾಬು ಸಮಾರಂಭದ ಅಧ್ಯಕ್ಷತೆವಹಿಸುವರು. ಶ್ರೀಮತಿ ಅರ್ಚನಾ ಉಡುಪ ತಂಡದವರಿಂದ ಸ್ಮೃತಿ ಗೀತಗಾಯನ ಕಾರ್ಯಕ್ರಮವಿದೆ.

ಪ್ರಶಸ್ತಿಗಳ ವಿವರ:

| ಕ್ರಮ ಸಂಖ್ಯೆ | ಪ್ರಶಸ್ತಿ ಹೆಸರು | ಕ್ಷೇತ್ರ | ಪ್ರಶಸ್ತಿ ವಿಜೇತರು |
|---|---|---|---|
| 1 | ಆರ್.ನಾಗೇಂದ್ರರಾವ್ ಪ್ರಶಸ್ತಿ | ಅಭಿನಯ (ನಟ) | ಶ್ರೀ ಜೆ.ಕೆ.ಶ್ರೀನಿವಾಸಮೂರ್ತಿ |
| 2 | ಎಂ.ವಿ.ರಾಜಮ್ಮ ಪ್ರಶಸ್ತಿ | ಅಭಿನಯ (ನಟಿ) | ಶ್ರೀಮತಿ ಆದವಾನಿ ಲಕ್ಷ್ಮೀದೇವಿ |
| 3 | ಟಿ.ಎನ್.ಬಾಲಕೃಷ್ಣ ಪ್ರಶಸ್ತಿ | ಅಭಿನಯ (ಹಾಸ್ಯ ಪಾತ್ರ) | ಶ್ರೀ ಎಂ.ಎಸ್.ಉಮೇಶ್ |
| 4 | ತೂಗುದೀಪ ಶ್ರೀನಿವಾಸ್ ಪ್ರಶಸ್ತಿ | ಅಭಿನಯ (ಖಳ ಪಾತ್ರ) | ಶ್ರೀ ಎಸ್.ದೊಡ್ಡಣ್ಣ |
| 5 | ಬಿ.ಆರ್.ಪಂತುಲು ಪ್ರಶಸ್ತಿ | ನಿರ್ದೇಶನ | ಶ್ರೀ ಕೆ.ವಿ.ರಾಜು |
| 6 | ಡಿ.ಶಂಕರಸಿಂಗ್ ಪ್ರಶಸ್ತಿ | ನಿರ್ಮಾಣ | ಶ್ರೀ ಸಿ.ಜಯರಾಂ |

| | | | |
|---|---|---|---|
| 7 | ಬಿ.ಜಯಮ್ಮ ಪ್ರಶಸ್ತಿ | ಪ್ರದರ್ಶನ | ಶ್ರೀ ಕುಮಾರ್ ಶೆಟ್ಟರ್ |
| 8 | ಎನ್.ವೀರಾಸ್ವಾಮಿ ಪ್ರಶಸ್ತಿ | ಹಂಚಿಕೆ | ಶ್ರೀ ಪಾಲ್ ಎಸ್.ಚಂದಾನಿ |
| 9 | ಜಿ.ವಿ.ಅಯ್ಯರ್ ಪ್ರಶಸ್ತಿ | ಸಂಗೀತ/ಗಾಯನ | ಶ್ರೀಮತಿ ಬಿ.ಕೆ.ಸುಮಿತ್ರಾ |
| 10 | ಹುಣಸೂರು ಕೃಷ್ಣಮೂರ್ತಿ ಪ್ರಶಸ್ತಿ | ಚಿತ್ರಸಾಹಿತ್ಯ | ಡಾ.ಬಿ.ಎಲ್.ವೇಣು |
| 11 | ಬಿ.ಎಸ್.ರಂಗ ಪ್ರಶಸ್ತಿ | ಛಾಯಾಗ್ರಹಣ | ಶ್ರೀ ಎಸ್.ವಿ.ಶ್ರೀಕಾಂತ್ |
| 12 | ಪಂಡರೀಬಾಯಿ ಪ್ರಶಸ್ತಿ | ಅಭಿನಯ (ಪೋಷಕ ಪಾತ್ರ) | ಶ್ರೀಮತಿ ಬಿ.ವಿ.ರಾಧಾ |
| 13 | ಎಂ.ಪಿ.ಶಂಕರ್ ಪ್ರಶಸ್ತಿ | ತಂತ್ರಜ್ಞಾನ | ಶ್ರೀಮತಿ ದೇವಿ (ನೃತ್ಯ) |
| 14 | ಶಂಕರನಾಗ್ ಪ್ರಶಸ್ತಿ | ಕಾರ್ಮಿಕ ವಿಭಾಗ | ಶ್ರೀ ಎನ್.ಎಲ್.ರಾಮಣ್ಣ (ನಿರ್ಮಾಣ ನಿರ್ವಾಹಕ) |
| 15 | ಕೆ.ಎನ್.ಟೈಲರ್ ಪ್ರಶಸ್ತಿ | ಪ್ರಾದೇಶಿಕ ಭಾಷಾ ಚಿತ್ರ | ಶ್ರೀ ರಾಮ್ ಶೆಟ್ಟಿ |

ಆರ್.ನಾಗೇಂದ್ರ ರಾವ್ ಪ್ರಶಸ್ತಿ (ಅಭಿನಯ –ನಟ)

ಜೆ. ಕೆ. ಶ್ರೀನಿವಾಸ ಮೂರ್ತಿ

ಕನ್ನಡ ಚಿತ್ರರಂಗ ಕಂಡ ಪ್ರಬುದ್ಧ ನಟರಲ್ಲಿ ಜೆ.ಕೆ.ಶ್ರೀನಿವಾಸಮೂರ್ತಿ ಪ್ರಮುಖರು. ಕನ್ನಡದ ಮಾತುಗಳನ್ನು ಸ್ಪಷ್ಟವಾಗಿ, ಸ್ಫುಟವಾಗಿ ಉಚ್ಚರಿಸಬಲ್ಲ ಬೆರಳೆಣಿಕೆಯ ಕಲಾವಿದರಲ್ಲಿ ಒಬ್ಬರು. ಜಡಲತಿಮ್ಮನಹಳ್ಳಿಯ ಶ್ರೀನಿವಾಸಮೂರ್ತಿ ಪದವಿಪೂರ್ವ ಶಿಕ್ಷಣದ ನಂತರ ಯೋಗಣ್ಣನವರ ನಾಟಕ ಕಂಪೆನಿಯಲ್ಲಿ ಕೆಲವು ವರ್ಷ ನಟರಾಗಿದ್ದರು. ತಮ್ಮ ಅಭಿನಯದ ದಾಹ ತಣಿಸಲು ಆಕಾಶವಾಣಿ ನಾಟಕಗಳು, ಸಮುದಾಯ ತಂಡ, ಇತರ ಕಂಪೆನಿಗಳ ಮೊರೆ ಹೋಗುತ್ತಿದ್ದ ಶ್ರೀನಿವಾಸ ಮೂರ್ತಿ ಅವರರನ್ನು ಬೆಳ್ಳಿತೆರೆಗೆ ಪರಿಚಯಿಸಿದ್ದು ಸಿದ್ಧಲಿಂಗಯ್ಯನವರ 'ಹೇಮಾವತಿ'. 1977ರಲ್ಲಿ ತೆರೆಕಂಡ ಈ ಚಿತ್ರದ ನಂತರ ಸಿದ್ಧಲಿಂಗಯ್ಯನವರ 'ಬಿಳಿಗಿರಿಯ ಬನದಲ್ಲಿ', 'ಪರಾಜಿತ' ಮುಂತಾದ ಚಿತ್ರಗಳಲ್ಲಿ ಅಭಿನಯಿಸಿದರು.ತನ್ನ ನಟನಾ ಸಾಮರ್ಥ್ಯದಿಂದ ಚಿತ್ರಗಳಲ್ಲಿ ಒಳ್ಳೆಯ ಅಭಿನಯ ನೀಡಿ ಹೆಸರಾದ ಶ್ರೀನಿವಾಸಮೂರ್ತಿ ಅವರು 'ಕವಿರತ್ನ ಕಾಳಿದಾಸ' ಚಿತ್ರದಲ್ಲಿ ಅಭಿನಯಿಸಿದ ಭೋಜರಾಜನ ಪಾತ್ರ ನೋಡಿದರೆ ಸಾಕು, ಅವರ ಅಭಿನಯ ಸಾಮರ್ಥ್ಯದ ಅರಿವಾಗುತ್ತದೆ. ಅವರು ಅಭಿನಯಿಸಿದ ಚಿತ್ರಗಳಲ್ಲಿ 'ಕೆರಳಿದ ಸಿಂಹ', 'ವಸಂತಗೀತ', 'ಹೊಸ ಬೆಳಕು', 'ಬಾಳನೌಕೆ', 'ಹಾಲುಂಡ ತವರು'. 'ಜೋಡಿ ಜೀವ', 'ಭಕ್ತ ಸಿರಿಯಾಳ', 'ಭಕ್ತ ಜ್ಞಾನದೇವ' ಮೊದಲ್ಗೊಂಡು ಇತ್ತೀಚಿನ 'ಅಪ್ಪು', 'ಕಿರಣ್ ಬೇಡಿ' ... ಹೀಗೆ 250ರ ಗಡಿ ದಾಟಿದೆ. ಶ್ರೀನಿವಾಸಮೂರ್ತಿ ಅವರು ನಿರ್ದೇಶಕರಾಗಿ 'ದೇವರ ಮಕ್ಕಳು' ಚಿತ್ರವನ್ನು ನೀಡಿದರು.ನಿರ್ಮಾಪಕರಾಗಿ 'ನಂಬಿದರೆ ನಂಬಿ, ಬಿಟ್ಟರೆ

ಬಿಡಿ, ಹೊಸಮನೆ ಅಳಿಯ' ಚಿತ್ರಗಳನ್ನು ನೀಡಿದರು. ಗೆಳೆಯರೊಡನೆ ಸೇರಿ 'ಮಾತೃ ದೇವೋ ಭವ' ಮತ್ತು 'ತಾಯಿಗೊಬ್ಬ ತರ್ಲೆ ಮಗ' ನಿಮಿಸಿದರೆ, ಕುಟುಂಬದ ನಿರ್ಮಾಣ 'ಧಿಮಾಕು'.ಹಂಚಿಕೆದಾರರಾಗಿ ಕೂಡಾ ಶ್ರೀನಿನಿವಾಸ ಮೂರ್ತಿ ಅವರು ಅನುಭವಿ. ಒಂದೆರಡು ಚಿತ್ರಗಳನ್ನು ಬಿಡುಗಡೆ ಮಾಡಿದ್ದಾರೆ.'ನಾರಿ ಸ್ವರ್ಗಕ್ಕೆ ದಾರಿ' ಚಿತ್ರದಲ್ಲಿನ ಅಭಿನಯಕ್ಕೆ ಅತ್ಯುತ್ತಮ ಪೋಷಕನಟ ರಾಜ್ಯ ಪ್ರಶಸ್ತಿ ಪಡೆದಿದ್ದಾರೆ ಶ್ರೀನಿವಾಸ ಮೂರ್ತಿ.

## ಎಂ.ವಿ.ರಾಜಮ್ಮ ಪ್ರಶಸ್ತಿ (ಅಭಿನಯ– ನಟಿ)

## ಆದವಾನಿ ಲಕ್ಷ್ಮೀದೇವಿ

ಅರುವತ್ತು–ಎಪ್ಪತ್ತರ ದಶಕಗಳ ಖ್ಯಾತ ಪೋಷಕ ನಟಿ. ತವರೂರು ಆಲೂರು. ಬೆಳೆದದ್ದು ಆದವಾನಿ. ಅದರಿಂದಾಗಿ ಆದವಾನಿ ಹೆಸರಿನ ಜೊತೆಗೇ ಅಂಟಿಕೊಂಡು ಬಂತು. ಏಳನೆಯ ವಯಸ್ಸಿಗೇ ನಾಟಕರಂಗಕ್ಕೆ ಪ್ರವೇಶ ಮಾಡಿದ ಇವರು ನಂತರ ಚಿತ್ರರಂಗಕ್ಕೂ ಪ್ರವೇಶ ಪಡೆದರು. ಶಾಸ್ತ್ರೀಯ ಸಂಗೀತ ಹಾಗೂ ನೃತ್ಯಗಳೆರಡರಲ್ಲೂ ಅನುಭವವಿದ್ದ ಲಕ್ಷ್ಮೀದೇವಿ ಕಟೀಲು ಕಂಪೆನಿ, ಗುಬ್ಬಿ ಕಂಪೆನಿಯಲ್ಲಿ ಅಭಿನಯಿಸಿ ಅನುಭವ ಗಳಿಸಿದರು.'ಹರಿಶ್ಚಂದ್ರ' ನಾಟಕದಲ್ಲಿ 'ಚಂದ್ರಮತಿ' ಪಾತ್ರದಲ್ಲಿ ಇವರ ಅಭಿನಯ ನೋಡಿದ ಅಯ್ಯರ್ ಈಕೆ ಚಿತ್ರರಂಗದಲ್ಲಿ ಬೆಳಗಬಲ್ಲ ನಟಿಯಾಗುತ್ತಾಳೆಂದು ಭವಿಷ್ಯ ನುಡಿದಿದ್ದರು.1957 ರಲ್ಲಿ ಬಿಡುಗಡೆಯಾದ 'ಭಕ್ತ ವಿಜಯ' ಚಿತ್ರದ ಮೂಲಕ ಚಿತ್ರರಂಗ ಪ್ರವೇಶ ಮಾಡಿದರು. ನಂತರ 'ಶುಕ್ರದೆಸೆ' ಚಿತ್ರದ ನಾಯಕಿಯಾಗಿ ಅವಕಾಶ ಪಡೆದರು. ನಂತರ 'ಮನೆ ತುಂಬಿದ ಹೆಣ್ಣು', 'ಮಂಗಳ ಸೂತ್ರ', 'ದಶಾವತಾರ', 'ಕಲಿತರೂ ಹೆಣ್ಣೇ', 'ಶ್ರೀರಾಮಾಂಜನೇಯ ಯದ್ಧ', 'ವೀರ ಸಂಕಲ್ಪ' ಚಿತ್ರಗಳಲ್ಲಿ ನಾಯಕಿಯಾಗಿ ಅಭಿನಯಿಸಿದರು. 'ತೇಜಸ್ವಿನಿ', 'ಚಂದವಳ್ಳಿಯ ತೋಟ', 'ಕರುಣೆಯೇ ಕುಟುಂಬದ ಕಣ್ಣು' ಚಿತ್ರಗಳಲ್ಲಿ ಉಪನಾಯಕಿಯಾಗಿ ಅಭಿನಯಿಸಿದರು. ನಂತರ ತಾಯಿ–ಅತ್ತೆ–ಅತ್ತಿಗೆ ವೈವಿಧ್ಯಮಯ ಮೊದಲಾದ ಪೋಷಕ ಪಾತ್ರಗಳಲ್ಲಿ ಅಭಿನಯಿಸಿದ್ದಾರೆ. 'ಗಂಧದ ಗುಡಿ' ಚಿತ್ರದಲ್ಲಿನ ಮಮತಾಮಯಿ ತಾಯಿಯ ಪಾತ್ರಾಭಿನಯಕ್ಕಾಗಿ ಅತ್ಯುತ್ತಮ ಪೋಷಕ ನಟಿ ಪ್ರಶಸ್ತಿಯನ್ನು ಪಡೆದಿದ್ದಾರೆ.

## ಪಂಢರಿಭಾಯಿ ಪ್ರಶಸ್ತಿ (ಅಭಿನಯ– ಪೋಷಕ ಪಾತ್ರ)

## ರಾಧಾ ಬಿ.ವಿ

ಕನ್ನಡ ಚಿತ್ರರಂಗದಲ್ಲಿ ನಾಲ್ಕು ದಶಕಗಳಿಂದ ಏಕಸಮನಾಗಿ ಜನಪ್ರಿಯತೆಯನ್ನು ಉಳಿಸಿಕೊಂಡು ಬಂದಿರುವ ಬಿ.ವಿ.ರಾಧಾ ಬಾಲನಟಿಯಾಗಿ ಚಿತ್ರರಂಗಕ್ಕೆ ಬಂದವರು. ನಾಟ್ಯಪ್ರವೀಣೆ. ಆಕೆ ಅಭಿನಯಿಸಿರುವ ಪಾತ್ರಗಳು ವೈವಿಧ್ಯಮಯ. ಇದು ವರೆಗೂ ಹೆಚ್ಚು ಕಡಿಮೆ 175 ಚಿತ್ರಗಳಲ್ಲಿ ಅಭಿನಯಿಸಿದ್ದಾರೆ. 'ನವಕೋಟಿ ನಾರಾಯಣ'ದಿಂದಾರಂಭಿಸಿ ಹಲವಾರು ಚಿತ್ರಗಳಲ್ಲಿ ತಂಗಿ, ಅಕ್ಕ, ಅತ್ತಿಗೆ, ನರ್ತಕಿ ಎಲ್ಲವೂ ಆದರು. ಬಿ.ವಿ.ರಾಧಾರವರು ನಾಯಕಿಯಾಗಿ, ಎರಡನೆಯ ನಾಯಕಿಯಾಗಿ, ಪೋಷಕ ನಟಿಯಾಗಿ ಶೋಭಿಸಿ ಅಭಿನಯವನ್ನು ಗಂಭೀರವಾದ ಕಲೆಯನ್ನಾಗಿ ಬೆಳೆಸಿಕೊಂಡು ಬಂದವರು. 'ದೇವರು ಕೊಟ್ಟ ತಂಗಿ', 'ಬೆಂಗಳೂರು ಮೈಲ್', 'ಅನಿರೀಕ್ಷಿತ', 'ಯಾವ ಜನ್ಮದ ಮೈತ್ರಿ', 'ಭಲೇ ಅದೃಷ್ಟವೋ ಅದೃಷ್ಟ' ಅಂತಹ ಚಿತ್ರಗಳಲ್ಲಿ ವಿಶೇಷ ಗಮನ ಸೆಳೆದ ಅವರು 'ಮಿಥಿಲೆಯ ಸೀತೆಯರು' ಚಿತ್ರದಲ್ಲಿ ಕ್ಲಿಷ್ಟ ಪಾತ್ರವೊಂದರ ಹೃದಯಂಗಮ ನಿರೂಪಣೆಯಿಂದ ಅಸಂಖ್ಯಾತ ಹೃದಯಗಳನ್ನು ಗೆದ್ದುಕೊಂಡರು. ರಾಧಾರವರು ಸಮರ್ಥ

ಚಿತ್ರ ನಿರ್ಮಾಪಕಿ.ರಾಧಾರವಿ ಚಿತ್ರ ಲಾಂಛನದಡಿ ಚಿತ್ರಗಳನ್ನು ನಿರ್ಮಿಸಿ ಅವರ ಪತಿ ನಿರ್ದೇಶಕ ಕೆ.ಎಸ್.ಎಲ್.ಸ್ವಾಮಿ (ರವೀ)ಯವರಿಗೆ ನೆರವಾಗಿದ್ದಾರೆ. ರವೀಯವರು ನಿರ್ಮಿಸಿ, ನಿರ್ದೇಶಿಸಿ ರಾಧಾರವರು ಕಾರ್ಯನಿರ್ವಾಹಕ ನಿರ್ಮಾಪಕರಾಗಿದ್ದ 'ಹರಕೆಯ ಕುರಿ' ಚಿತ್ರಕ್ಕೆ ರಾಜ್ಯ ಸರ್ಕಾರದಿಂದ 1992-93ನೇ ಸಾಲಿನ ತೃತೀಯ ಅತ್ಯುತ್ತಮ ಚಿತ್ರ ಪ್ರಶಸ್ತಿ ಲಭ್ಯವಾಯಿತು. ರಾಧಾ ಕಿರುತೆರೆಯಲ್ಲಿ ಬಿಡುವಿಲ್ಲದ ಕಲಾವಿದೆ.

**ಟಿ.ಎನ್.ಬಾಲಕೃಷ್ಣ ಪ್ರಶಸ್ತಿ (ಅಭಿನಯ- ಹಾಸ್ಯಪಾತ್ರ)**

**ಉಮೇಶ್.ಎಂ.ಎಸ್**

ರಂಗಭೂಮಿ ಹಾಗೂ ಚಿತ್ರರಂಗಕ್ಕೆ ಬಾಲನಟರಾಗಿ ಪ್ರವೇಶಿಸಿದರು. ಜನನ : 1944. ಎಂ.ಸಿ.ಮಹಾದೇವಸ್ವಾಮಿಯವರ ನಾಟಕ ಸಂಸ್ಥೆಗೆ ಬಾಲನಟರಾಗಿ ಸೇರಿಕೊಂಡರು. ಎಂ.ವಿ.ರಾಜಮ್ಮನವರ 'ಮಕ್ಕಳ ರಾಜ್ಯ' (1960) ಚಿತ್ರದ ಮೂಲಕ ಬಾಲನಟರಾಗಿ ಚಿತ್ರರಂಗ ಪ್ರವೇಶಿಸಿದರು.'ಕಥಾಸಂಗಮ'ದ (1976) ಕೊನೆಯ ಭಾಗ 'ಮುನಿತಾಯಿ'ಯಲ್ಲಿ ತಿಮ್ಮರಾಯಿ ಪಾತ್ರದಿಂದ ಮತ್ತೆ ಪ್ರಸಿದ್ಧಿಗೆ ಬಂದರು. ಚಲನಚಿತ್ರರಂಗದ ಖ್ಯಾತ ಹಾಸ್ಯನಟರಾಗಿರುವ ಇವರು 200ಕ್ಕೂ ಹೆಚ್ಚು ಚಿತ್ರಗಳಲ್ಲಿ ಅಭಿನಯಿಸಿದ್ದಾರೆ. ಅವುಗಳಲ್ಲಿ ಅನೇಕ ಪಾತ್ರಗಳು ವೈವಿಧ್ಯಪೂರ್ಣ.'ಮುನಿತಾಯಿ' ಚಿತ್ರದ ಪಾತ್ರಕ್ಕೆ ಸರ್ಕಾರ ಅತ್ಯುತ್ತಮ ಪೋಷಕನಟ ಪ್ರಶಸ್ತಿ ನೀಡಿ ಗೌರವಿಸಿದೆ.

**ತೂಗುದೀಪ ಪ್ರಶಸ್ತಿ (ಅಭಿನಯ- ಖಳಪಾತ್ರ)**

**ದೊಡ್ಡಣ್ಣ**

ಕನ್ನಡ ಚಿತ್ರರಂಗ ಹಾಗೂ ರಂಗಭೂಮಿಗಳ ಪ್ರತಿಭಾವಂತ ನಟರಲ್ಲೊಬ್ಬರು ದೊಡ್ಡಣ್ಣ. ಕೆಲವೇ ವರ್ಷಗಳಲ್ಲಿ 200ಕ್ಕೂ ಹೆಚ್ಚು ಚಿತ್ರಗಳಲ್ಲಿ ಅಭಿನಯಿಸಿದ್ದಾರೆ. ಭದ್ರಾವತಿಯ ವಿಶ್ವೇಶ್ವರಯ್ಯ ಕಬ್ಬಿಣ ಮತ್ತು ಉಕ್ಕು ಕಾರ್ಖಾನೆಯಲ್ಲಿ ಕಾರ್ಮಿಕರಾಗಿದ್ದ ದೊಡ್ಡಣ್ಣ ಅಭಿನಯಿಸಿದ ಮೊದಲ ಕನ್ನಡ ಚಿತ್ರ 'ಕೂಡಿ ಬಾಳಿದರೆ ಸ್ವರ್ಗ ಸುಖ'. ಖಳನಾಯಕ, ಹಾಸ್ಯ ನಟರಾಗಿ ವಿಶೇಷ ಗಮನ ಸೆಳೆದಿರುವ ಅವರು ಕೆಲವು ಗಂಭೀರ ಪಾತ್ರಗಳಲ್ಲಿಯೂ ಹೃದಯ ಮುಟ್ಟುವಂತೆ ಅಭಿನಯಿಸಿದ್ದಾರೆ.ಅವರದ್ದೇ ಆದ ಅಭಿನಯ ಶೈಲಿ ರೂಢಿಸಿಕೊಂಡವರು.'ಬೆಳ್ಳಿ ಮೋಡಗಳು' ಚಿತ್ರದಲ್ಲಿನ ಅವರ ಭಾವಪೂರ್ಣ ಅಭಿನಯ ಉಲ್ಲೇಖನಾರ್ಹ. 'ಕಳ್ಳ ಮಳ್ಳ', 'ರಾಣಿ ಮಹಾರಾಣಿ', 'ಹಲೋ ಯಮ', 'ಸಿ.ಬಿ.ಐ.ಶಂಕರ್', 'ರಣಚಂಡಿ', 'ಪ್ರಜಾಶಕ್ತಿ' ಮುಂತಾದ ಯಶಸ್ವಿ ಚಿತ್ರಗಳಲ್ಲಿ ಅಭಿನಯಿಸಿದರು. ಸಂಗೀತಂ ಶ್ರೀನಿವಾಸರಾವ್ ನಿರ್ದೇಶನದ 'ಟುವ್ವಿ ಟುವ್ವಿ ಟುವ್ವಿ' ಚಿತ್ರದಲ್ಲಿನ ಅವರ ಅಭಿನಯಕ್ಕಾಗಿ ದೊಡ್ಡಣ್ಣನವರಿಗೆ 1998-99ನೇ ಸಾಲಿನ ಅತ್ಯುತ್ತಮ ಪೋಷಕ ನಟ ಪ್ರಶಸ್ತಿ ಲಭ್ಯವಾಯಿತು.

**ಬಿ.ಆರ್.ಪಂತುಲು ಪ್ರಶಸ್ತಿ (ನಿರ್ದೇಶನ)**
**ರಾಜು.ಕೆ.ವಿ**

ಕನ್ನಡ ಚಿತ್ರರಂಗದ ಪ್ರಮುಖ ನಿರ್ದೇಶಕರು ಹಾಗೂ ಚಿತ್ರಸಾಹಿತಿಗಳಲ್ಲಿ ಒಬ್ಬರು ಕೆ.ವಿ.ರಾಜು. ಚಲನಚಿತ್ರ ಮಾಧ್ಯಮವನ್ನು ಸಾಮಾಜಿಕ ಪರಿವರ್ತನೆಗಾಗಿ ಬಳಸಿಕೊಳ್ಳುವ ತುಡಿತದವರು. ಚಲನಚಿತ್ರಗಳ ಮೂಲಕ ಸಮಾಜದ ನಾನಾ ಹುಳುಕುಗಳ ವಿರುದ್ಧ, ಅನ್ಯಾಯ ಹಾಗೂ ಅಸಮತೆಗಳ ವಿರುದ್ಧ

ಪರಿಣಾಮಕಾರಿ ರೀತಿಯಲ್ಲಿ ತಮ್ಮ ಆಕ್ರೋಶವನ್ನು ತೋಡಿಕೊಂಡವರು. ಅವರ ಚಿತ್ರಗಳ ಹೆಚ್ಚಳಗಳೆಂದರೆ ತಾಂತ್ರಿಕ ಶ್ರೀಮಂತಿಕೆ ಮತ್ತು ಪದ ವೈಭವ. ವಿಪರ್ಯಾಸವೆಂದರೆ ಅವರು ನಿರ್ದೇಶಿಸಿದ ಮೊದಲ ಚಿತ್ರ ಶಂಕರ್‌ನಾಗ್ ಮತ್ತು ಅನಂತ್‌ನಾಗ್‌ರವರ ನಿರ್ಮಾಣದ 'ಕೂಗು' ತೆರೆ ಕಾಣಲೇ ಇಲ್ಲ. ನಂತರ ಅವರು ನಿರ್ದೇಶಿಸಿದ ಚಿತ್ರಗಳು 'ಬಂಧಮುಕ್ತ', 'ಸಂಗ್ರಾಮ', 'ಅಭಿಜಿತ್', 'ಯುದ್ಧಕಾಂಡ', 'ಇಂದ್ರಜಿತ್', 'ನವಭಾರತ', ' ಕದನ', 'ಸುಂದರ ಕಾಂಡ', 'ಬೆಳ್ಳಿ ಮೋಡಗಳು', 'ಬೆಳ್ಳಿ ಕಾಲುಂಗುರ', 'ಓ ಗಂಡಸರೇ ನೀವೆಷ್ಟು ಒಳ್ಳೆಯವರು', 'ಯುದ್ಧ', 'ಹುಲಿಯಾ', 'ನಂ.1' ಇತ್ಯಾದಿ. ರಾಜುರವರು ಹಿಂದಿಯಲ್ಲಿ ನಿರ್ದೇಶಿಸಿದ ಚಿತ್ರಗಳು 'ಇಂದ್ರಜಿತ್'(ನಾಯಕ: ಅಮಿತಾಬ್ ಬಚ್ಚನ್) ಮತ್ತು 'ಉಧಾರ್ ಕೆ ಜಿಂದಗಿ' (ನಾಯಕ: ಜಿತೇಂದ್ರ). ಸಶಕ್ತ ಲೇಖಕರಾದ ರಾಜು 50ಕ್ಕೂ ಹೆಚ್ಚು ಕನ್ನಡ ಚಿತ್ರಗಳಿಗೆ ಚಿತ್ರಕಥೆ ಮತ್ತು ಸಂಭಾಷಣೆಗಳನ್ನು ರಚಿಸಿದ್ದಾರೆ. ಅವುಗಳಲ್ಲಿ ಮುಖ್ಯವಾದವು 'ಹೊಸ ನೀರು', 'ಸಂಕ್ರಾಂತಿ', 'ಸಾಂಗ್ಲಿಯಾನ', 'ಸಿ.ಬಿ.ಐ.ಶಂಕರ್', 'ಬ್ರಹ್ಮಾಸ್ತ್ರ' ಮತ್ತು 'ಪೊಲೀಸ್ ಪವರ್'. ರಾಜ್ಯಪ್ರಶಸ್ತಿ ವಿಜೇತ ಚಿತ್ರಗಳಾದ 'ಬಾಡದ ಹೂ' ಮತ್ತು 'ಹೊಸ ನೀರು' ಮೊದಲುಗೊಂಡು 'ಮರಳು ಸರಪಣಿ', 'ಬೆತ್ತಲೆ ಸೇವೆ', 'ಮುದುಡಿದ ತಾವರೆ ಅರಳಿತು', 'ಇಬ್ಬನಿ ಕರಗಿತು', 'ಶ್ವೇತ ಗುಲಾಬಿ' ಚಿತ್ರಗಳಲ್ಲಿ ಅವರ ಸೋದರ, ಖ್ಯಾತ ನಿರ್ದೇಶಕ ಕೆ.ವಿ.ಜಯರಾಂರೊಂದಿಗೆ ರಾಜು ಸಾಹಿತ್ಯ, ಸಹನಿರ್ದೇಶನ ಕ್ಷೇತ್ರಗಳಲ್ಲಿ ದುಡಿದರು. ಎಂ.ಆರ್.ವಿಠಲ್ ಮತ್ತು ಎಂ.ವಿ.ತಿರುಮುಗಂರಂತಹ ಹಿರಿಯ ನಿರ್ದೇಶಕರೊಂದಿಗೆ ಕೂಡ ಅವರು ಸಹ ನಿರ್ದೇಶಕರಾಗಿ ಕೆಲಸ ನಿರ್ವಹಿಸಿದವರು. ಕೆ.ವಿ.ರಾಜು ಉತ್ತಮ ಸಂಕಲನಕಾರರು.

## ಡಿ.ಶಂಕರ ಸಿಂಗ್ ಪ್ರಶಸ್ತಿ

## ಸಿ. ಜಯರಾಂ.

**ಸಿ. ಜಯರಾಂ ಸದಭಿರುಚಿಯ ಚಿತ್ರಗಳ ನಿರ್ಮಾಣಕ್ಕೆ ಹೆಸರಾದವರು. ಮೊದಲಿನಿಂದಲೂ ಚಿತ್ರ ಸಂಬಂದಧ ವಿಷಯಗಳಲ್ಲಿ ಆಸಕ್ತರಾಗಿದ್ದು ಚಿತ್ರ ನಿರ್ಮಾಣದ ಎಲ್ಲಾ ವಿಭಾಗಗಳಲ್ಲಿ ದುಡಿದ ಅನುಭವದಿಂದ ನಿರ್ಮಾಪಕರಾಗಿ, ಪಾವನಗಂಗಾ, 'ಅನುಪಮಾ', 'ನಾ ನಿನ್ನ ಬಿಡಲಾರೆ', 'ರಾಮಾಪುರದ ರಾವಣ' ಮುಂತಾದ ಚಿತ್ರಗಳನ್ನು ನಿರ್ಮಿಸಿದರು. ರಾಜಕುಮಾರ್ ಅಭಿನಯದ 'ಕಾಮನಬಿಲ್ಲು' ಇವರ ನಿರ್ಮಾಣದ ಚಿತ್ರ. ಈ ಚಿತ್ರದಲ್ಲಿ ಮೊದಲ ಬಾರಿಗೆ ರಾಜಕುಮಾರ್ ಯೋಗಾಭ್ಯಾಸದ ದೃಶ್ಯವಿದ್ದು, ಮುಂದೆ ಅವರ ಅಭಿಮಾನಿಗಳು ಅದನ್ನು ಅನುಸರಿಸಿದ್ದು ವಿಶೇಷ. ಅವರ ಪುತ್ರ ಪ್ರಕಾಶ್ ಜನಪ್ರಿಯ ಚಿತ್ರ ನಿರ್ದೇಶಕರು. ಅಳಿಯ ಬಾಲರಾಜ್ ಚಿತ್ರನಟರು.**

**<u>ಬಿ.ಜಯಮ್ಮ ಪ್ರಶಸ್ತಿ (ಪ್ರದರ್ಶನ)</u>**
**<u>ಕುಮಾರ ಶೆಟ್ಟರು</u>**

ಕುಮಾರಶೆಟ್ಟರ ಶ್ರೀ ಸಿದ್ಧಲಿಂಗೇಶ್ವರ ಎಂಟರ್‌ಪ್ರೈಸಸ್ ಸಂಸ್ಥೆಯ ಮಾಲೀಕರು. ವಿತರಣೆ, ಪ್ರದರ್ಶನ ಎರಡನ್ನೂ ನಿರ್ವಹಿಸಿದ ಸಂಸ್ಥೆಯಾಗಿ ಕನ್ನಡ ಚಿತ್ರಗಳಿಗೆ ಹೊಸ ಮಾರುಕಟ್ಟೆಯನ್ನು ತಂದುಕೊಟ್ಟಿತು. ಮುಂಬೈ ಕರ್ನಾಟಕದಲ್ಲಿ ಕನ್ನಡ ಚಿತ್ರಗಳ ಮಾರುಕಟ್ಟೆ, ಗಳಿಕೆ ಇತ್ಯಾದಿಗಳ ಬಗ್ಗೆ ಏನೊಂದೂ ತಿಳಿದಿರದ ದಿನಗಳಲ್ಲಿ ಆ ವಿಭಾಗದ ಹೊಣೆ ಹೊತ್ತು ಕನ್ನಡ ಚಿತ್ರಗಳಿಗೆ ಹಂಚಿಕೆ ಮತ್ತು ಪ್ರದರ್ಶನಗಳಲ್ಲಿ ನೆರವಾದರು. ಹಿರೇಕೆರೂರಿನ ಕುಮಾರೇಶ್ವರ ಚಿತ್ರಮಂದಿರ ಸೇರಿದಂತೆ ಅವರ ಮಾಲಿಕತ್ವ ಮತ್ತು ಉಸ್ತುವಾರಿಯ ಚಿತ್ರಮಂದಿರಗಳಲ್ಲಿ ಕನ್ನಡ ಚಿತ್ರಗಳನ್ನು ಮಾತ್ರ ಪ್ರದರ್ಶಿಸುತ್ತಿದೆ ಶ್ರೀ ಸಿದ್ಧಲಿಂಗೇಶ್ವರ ಎಂಟರ್ ಪ್ರೈಸಸ್. ಆ ಸಂಸ್ಥೆ 1980 ಫೆಬ್ರವರಿ 15ರಂದು ಆರಂಭವಾಗಿ, 'ನನ್ನ ರೋಷ ನೂರು ವರುಷ' ಮೊದಲ್ಗೊಂಡು ಮುನ್ನೂರಕ್ಕೂ ಹೆಚ್ಚು ಚಿತ್ರಗಳನ್ನು ವಿತರಿಸದ ಖ್ಯಾತಿಯನ್ನೂ ಪಡೆದಿದೆ.

**ವೀರಾಸ್ವಾಮಿ ಪ್ರಶಸ್ತಿ (ಹಂಚಿಕೆ)**
**ಪಾಲ್ ಎಸ್.ಚಂದಾನಿ**

ಕರಾಚಿಯಿಂದ ತಮ್ಮ 13ನೇ ವಯಸ್ಸಿನಲ್ಲಿ ಬೆಂಗಳೂರಿಗೆ ಬಂದು ಇಲ್ಲಿನವರೇ ಆಗಿದ್ದಾರೆ ಕನ್ನಡ ಚಿತ್ರರಂಗಕ್ಕೆ ಗಣನೀಯ ಸೇವೆ ಸಲ್ಲಿಸಿದವರು ಪಾಲ್ ಎಸ್.ಚಂದಾನಿ. 1935ರ ಮಾರ್ಚ್ 10ರಂದು ಜನಿಸಿದ ಚಂದಾನಿ ಅವರು, 1964ರಲ್ಲಿ 'ನನ್ನ ಕರ್ತವ್ಯ' ಚಿತ್ರದ ಮೂಲಕ ಕನ್ನಡ ಬೆಳ್ಳಿತೆರೆಯ ನಂಟು ಬೆಳೆಸಿಕೊಂಡರು. ಅಭಿನಯ, ತ್ರಿವೇಣಿ ಹಾಗೂ ಸಂತೋಷ್, ಶಿವಮೊಗ್ಗದ ಮಲ್ಲಿಕಾರ್ಜುನ, ಚಿಕ್ಕಮಗಳೂರಿನ ನಾಗಲಕ್ಷ್ಮೀ ಚಿತ್ರಮಂದಿರಗಳ ಗುತ್ತಿಗೆದಾರರಾಗಿ ಕನ್ನಡ ಚಿತ್ರರಂಗಕ್ಕೆ ಬಹುಮೂಲ್ಯ ಸೇವೆ ಸಲ್ಲಿಸಿದ್ದಾರೆ. ಮುಂಬೈನ ಭಾರಿ ಚಿತ್ರ ನಿರ್ಮಾಪಕರ ಚಿತ್ರಗಳನ್ನು ವಿತರಣೆ ಮಾಡಿದ ಕೀರ್ತಿ ಇವರದು. ಬಹಳಷ್ಟು ಚಿತ್ರಗಳಿಗೆ ಬಂಡವಾಳಗಾರರು, ವಿತರಕರು ಆಗಿದ್ದಾರೆ. ಕನ್ನಡ ಚಿತ್ರಗಳ ಬೆಳವಣಿಗೆಗೆ ಬಹಳಷ್ಟು ಸಹಕಾರಿಯಾಗಿ ಕಾರ್ಯ ನಿರ್ವಹಿಸಿದ್ದಾರೆ. ವಿಜಯಲಕ್ಷ್ಮಿ ಸಿಂಗ್, ಎಂ.ರಾಮನ್ ಮೊದಲಾದ ನಿರ್ಮಾಪಕರ ಬೆನ್ನಿಗಿದ್ದು ಉತ್ತಮ ಚಿತ್ರ ನಿರ್ಮಿಸಲು ನೆರವಾದರು. ಶಂಕರ್‌ನಾಗ್ ಅವರ ಆಪ್ತ ಮಿತ್ರರು. ಆತನ ಎಲ್ಲ ಚಟುವಟಿಕೆಯ ಹಿಂದೆ ಪಾಲ್ ಇರುತ್ತಿದ್ದರು. ಬೆಂಗಳೂರಿನ ಪ್ರಮುಖ ಹಿಂದಿ ಮತ್ತು ಕನ್ನಡ ಚಿತ್ರಗಳ ವಿತರಕರು ಹಾಗೂ ಪ್ರದರ್ಶಕರು.

**ಜಿ.ವಿ.ಅಯ್ಯರ್ ಪ್ರಶಸ್ತಿ (ಸಂಗೀತ ಸಂಯೋಜನೆ/ಗಾಯನ)**
**ಬಿ. ಕೆ. ಸುಮಿತ್ರ**

'ಮಧುರ ಮಧುರವೀ ಮಂಜುಳ ಗಾನ' –ಹಾಡನ್ನು ಹಾಡಿದ ಬಿ.ಕೆ. ಸುಮಿತ್ರ ಅವರು ಹಾಡಿದ ಬಹುತೇಕ ಹಾಡುಗಳಿಗೆ ಈ ಸಾಲನ್ನು ಹೇಳಬಹುದು. ಸುಮಿತ್ರ. ಮಲೆನಾಡಿನವರು. ಹುಟ್ಟಿದ್ದು ಬಿಳಲುಕೊಪ್ಪ ಗ್ರಾಮದಲ್ಲಿ. ತಂದೆ ಪಟೇಲ್ ಕೃಷ್ಣಯ್ಯ, ತಾಯಿ ಗಂಗಮ್ಮ. ಚಿಕ್ಕಂದಿನಿಂದಲೇ ಹಾಡುವುದರಲ್ಲಿ ಆಸಕ್ತಿ. ಓದಿದ್ದು ಪದವಿ.ಸಂಗೀತದ ಗುರುಗಳು. ವಿದ್ವಾನ್ ಮಂಜಪ್ಪ ಜೋಯಿಸರು ಹಾಗೂ ಎಂ.ಪ್ರಭಾಕರ್. ಬಿ.ಕೆ.ಸುಮಿತ್ರ ಹಿನ್ನೆಲೆ ಗಾಯಕಿಯಾಗಿ ಚಿತ್ರರಂಗ ಪ್ರವೇಶಿಸಿದ್ದು ಜಿ.ಕೆ.ವೆಂಕಟೇಶ್ ಸಂಗೀತ ನಿರ್ದೇಶನದ 'ಕವಲೆರಡು ಕುಲವೊಂದು' ಚಿತ್ರಕ್ಕಾಗಿ ಹಾಡಿದ 'ಕಣ್ಣೇ ನಿನ್ನಯ ಕೋಪವಿದೇನೋ...' ಎಂಬ ಹಾಡಿನ ಮೂಲಕ. ಸುಮಾರು 200ಕ್ಕೂ ಹೆಚ್ಚು ಚಿತ್ರಗಳಲ್ಲಿ ಗಾಯಕಿಯಾಗಿ ಅವಕಾಶ. 'ಬೆಳ್ಳಿ ಮೋಡ', 'ಅನುರಾಧಾ', 'ಸತಿ ಸುಕನ್ಯ', 'ಉಪಾಸನೆ' , 'ಕಲ್ಯಾಣಿ' ಈ ಚಿತ್ರಗಳಲ್ಲಿ ಸೇರಿವೆ. ಸುಮಿತ್ರ ಅವರು ಪುಟ್ಟಣ್ಣ ಕಣಗಾಲರ 'ಉಪಾಸನೆ' ಚಿತ್ರಕ್ಕಾಗಿ ಹಾಡಿದ 'ಸಂಪಿಗೆ ಮರದ ಹಸಿರೆಲೆ ನಡುವೆ ಕೋಗಿಲೆ ಹಾಡಿತ್ತು...' ಅವರ ಅತ್ಯಂತ ಜನಪ್ರಿಯ ಗೀತೆಗಳಲ್ಲಿ ಒಂದು. ಚಿತ್ರಸಂಪಿಗೆಯ ಮರದಲ್ಲಿ ಹಾಡುತ್ತಿದ್ದ ಇವರನ್ನು 'ಕನ್ನಡದ ಕೋಗಿಲೆ' ಎಂದು ಚಿತ್ರರಸಿಕರು ಬಿರುದು ನೀಡಿ ಗೌರವಿಸಿದರು. ಸುಮಿತ್ರ ಅವರ ಮಕ್ಕಳು ಕೂಡಾ ಒಳ್ಳೆಯ ಗಾಯಕರು. ಮಗ ಸುನಿಲ್ ರಾವ್, ಗಾಯಕ ಮಾತ್ರವಲ್ಲ ಚಿತ್ರನಟರು ಕೂಡಾ.ಮಗಳು ಸೌಮ್ಯ ಕನ್ನಡ ಮಾತ್ರವಲ್ಲದೆ ತೆಲುಗು, ಹಿಂದಿ ರಂಗಗಳಲ್ಲೂ ಹೆಸರಾಂತ ಹಿನ್ನೆಲೆ ಗಾಯಕಿ.

**ಹುಣಸೂರು ಕೃಷ್ಣಮೂರ್ತಿ ಪ್ರಶಸ್ತಿ (ಚಿತ್ರಸಾಹಿತ್ಯ)**

**ವೇಣು.ಬಿ.ಎಲ್**

**ಪ್ರಶಸ್ತಿ ವಿಜೇತ ಚಿತ್ರಕಥಾ ಲೇಖಕರು. ಸಂಭಾಷಣೆಕಾರ ಹಾಗೂ ಕಾದಂಬರಿಕಾರರಾದ ಬಿ.ಎಲ್.ವೇಣು ಚಿತ್ರದುರ್ಗದವರು. ಸುಮಾರು 25 ಕಾದಂಬರಿಗಳು, 5 ಕಥಾ ಸಂಕಲನಗಳು, 4 ನಾಟಕಗಳನ್ನು ರಚಿಸಿರುವ ವೇಣು ಸಂಭಾಷಣೆ ರಚಿಸಿದ ಮೊದಲ ಚಿತ್ರ 'ದೊಡ್ಡಮನೆ ಎಸ್ಟೇಟ್'.'ಪರಾಜಿತ', 'ಪ್ರೇಮಪರ್ವ', 'ಅಜೇಯ', 'ಪ್ರೀತಿ ವಾತ್ಸಲ್ಯ', 'ಪ್ರೇಮಜಾಲ', 'ಬೆತ್ತಲೆ ಸೇವೆ', 'ರಾಮರಾಜ್ಯದಲ್ಲಿ ರಾಕ್ಷಸರು' ಚಿತ್ರಗಳು ವೇಣು ಅವರ ಅದೇ ಹೆಸರಿನ ಕಾದಂಬರಿಗಳನ್ನು ಆಧರಿಸಿ ತೆರೆಗೆ ಬಂದ ಚಿತ್ರಗಳು. 'ರಾಜ**

**ಮಹಾರಾಜ', 'ನನ್ನವರು', 'ಒಲವಿನ ಉಡುಗೊರೆ', 'ಮೂರುಜನ್ಮ' ಚಿತ್ರಗಳ ಚಿತ್ರಕಥೆಗಳನ್ನು ರಚಿಸಿದ್ದಾರೆ. 'ಅಪರಂಜಿ', 'ಜನನಾಯಕ', 'ದೇವ', 'ಅಜೇಯ', 'ಮಾಧುರಿ', 'ಸೇಡಿನ ಹಕ್ಕಿ', 'ಅಮೃತ ಘಳಿಗೆ', 'ವೀರಪ್ಪನಾಯಕ', 'ರಾಜಕೀಯ', 'ಮಕ್ಕಳ ಸಾಕ್ಷಿ' ಚಿತ್ರಗಳಿಗೆ ಸಂಭಾಷಣೆ ರಚಿಸಿದ್ದಾರೆ.'ಅಪರಂಜಿ' ಚಿತ್ರದ ಸಂಭಾಷಣೆಗಾಗಿ 1983-84ರ ರಾಜ್ಯ ಸರ್ಕಾರದ ಅತ್ಯುತ್ತಮ ಸಂಭಾಷಣ ಕರ್ತೃ ಪ್ರಶಸ್ತಿ ಪಡೆದಿದ್ದಾರೆ.**

<u>ಬಿ.ಎಸ್‌ರಂಗಾ ಪ್ರಶಸ್ತಿ (ಛಾಯಾಗ್ರಹಣ)</u>

<u>ಶ್ರೀಕಾಂತ್.ಎಸ್.ವಿ</u>

ಕನ್ನಡ ಚಿತ್ರರಂಗದ ಪ್ರತಿಭಾಶಾಲಿ ಛಾಯಾಗ್ರಾಹಕ. ಹುಟ್ಟೂರು ಮದ್ದೂರು. ತಂದೆ ಎಸ್.ವೆಂಕಟಸುಬ್ಬ ಅಯ್ಯರ್. ಬೆಂಗಳೂರಿನ ಸೈಂಟ್ ಜೋಸೆಫ್ ಕಾಲೇಜಿನಿಂದ ಬಿ.ಎಸ್‌ಸಿ., ಪದವಿ ಪಡೆದು 1956ರಲ್ಲಿ ಗೋಲ್ಡನ್ ಸ್ಟುಡಿಯೋ ಪ್ರವೇಶಿಸಿದರು. ಸ್ವತಂತ್ರ ಛಾಯಾಗ್ರಾಹಕರಾಗಿ 'ಜೀವನ ತರಂಗ' ಚಿತ್ರದಿಂದ ಪ್ರವೇಶ. 'ಮಾರ್ಗದರ್ಶಿ', 'ಗೆಜ್ಜೆಪೂಜೆ', 'ಉಪಾಸನೆ' ಮೊದಲಾದ ಖ್ಯಾತ ಚಿತ್ರಗಳಲ್ಲಿ ಛಾಯಾಗ್ರಾಹಕರಾಗಿ ದುಡಿದ ಇವರಿಗೆ 1968-69ರಲ್ಲಿ 'ಮಾರ್ಗದರ್ಶಿ', 1969-70ರಲ್ಲಿ 'ಗೆಜ್ಜೆಪೂಜೆ' ಹಾಗೂ 1974-75ರಲ್ಲಿ 'ಉಪಾಸನೆ' ಚಿತ್ರಗಳ ಛಾಯಾಗ್ರಹಣಕ್ಕಾಗಿ ಮೂರು ಬಾರಿ ರಾಜ್ಯ ಸರ್ಕಾರದ ಪ್ರಶಸ್ತಿ ಲಭ್ಯವಾಗಿದೆ. ಟ್ರಿಕ್ ಫೊಟೋಗ್ರಫಿಯಲ್ಲಿ ಶ್ರೀಕಾಂತ್ ನಿಪುಣರು.

<u>ಎಂ.ಪಿ. ಶಂಕರ್ ಪ್ರಶಸ್ತಿ (ತಂತ್ರಜ್ಞಾನ)</u>

<u>ದೇವಿ</u>

ಖ್ಯಾತ ನೃತ್ಯ ನಿರ್ದೇಶಕ ಉಡುಪಿ ಜಯರಾಂ ಅವರ ಸಹಾಯಕಿ. ಎರಡು ದಶಕಗಳಿಗೂ ಮೀರಿ ಉಡುಪಿ ಜಯರಾಂ ಅವರ ಶಿಷ್ಯೆಯಾಗಿ ಅಚಲ ನಿಷ್ಠೆ, ಶ್ರದ್ಧೆ, ಭಕ್ತಿಗಳ ಸಂಕೇತದಂತಿದ್ದರು. ದೇವಿ ಮೂಲತಃ ಕೇರಳದವರು. ಒಂಬತ್ತನೆಯ ತರಗತಿಯವರೆಗೆ ವಿದ್ಯಾಭ್ಯಾಸ ಮಾಡಿದ ಆಕೆ ಹನ್ನೆರಡನೆಯ ವಯಸ್ಸಿಗೆ ಶಾಸ್ತ್ರೀಯ ನೃತ್ಯದಲ್ಲಿ ಖ್ಯಾತ ಗುರು ಪದ್ಮಾ ಸುಬ್ರಹ್ಮಣ್ಯಂ ಶಿಷ್ಯೆಯಾಗಿ ಅಭ್ಯಾಸ ಆರಂಭಿಸಿದರು. ನಂತರ ಭರತನಾಟ್ಯ, ಕೂಚುಪುಡಿ, ಕಥಕ್ಕಳಿ, ಮಣಿಪುರಿ ನೃತ್ಯಗಳಲ್ಲಿ ಪರಿಶ್ರಮ ಹೊಂದಿದರು. ಚಿನ್ನಿಲಾಲ್ ಅವರೊಂದಿಗೆ ಕೆಲಸ ಮಾಡಿದ್ದರು. ಉಡುಪಿ ಜಯರಾಂ ಸಹಾಯಕಿಯಾಗಿ ಪ್ರಥಮವಾಗಿ ಕನ್ನಡದಲ್ಲಿ ಕೆಲಸ ಮಾಡಿದ ಚಿತ್ರ 'ಚದುರಂಗ'.ಸುಮಾರು 500 ಚಿತ್ರಗಳಿಗೆ ಸಹ ನೃತ್ಯ ನಿರ್ದೇಶಕಿಯಾಗಿ ದುಡಿದರು. ಎಂದೂ ಸ್ವತಂತ್ರ ನೃತ್ಯ ನಿರ್ದೇಶಕಿಯಾಗಲು ಆಸೆ ಪಡಲಿಲ್ಲ. ಆಕೆಯ ಪ್ರಕಾರ ಅದೇ ಆಕೆ ಗುರುವಿಗೆ ನೀಡುವ ಗುರುದಕ್ಷಿಣೆ. ರಾಜಕುಮಾರ್ ಅಭಿನಯದ 25 ಚಿತ್ರಗಳಿಗೆ ಸಹ ನೃತ್ಯ ನಿರ್ದೇಶನ ಮಾಡಿದ್ದಾರೆ ದೇವಿ.

<u>ಶಂಕರನಾಗ್ ಪ್ರಶಸ್ತಿ (ಕಾರ್ಮಿಕ ವಿಭಾಗ)</u>

<u>ರಾಮಣ್ಣ (ನಿರ್ಮಾಣ ನಿರ್ವಹಣೆ)</u>

**ಚಲನಚಿತ್ರ ನಿರ್ಮಾಣ ನಿರ್ವಾಹಕರಾಗಿ ಕಳೆದ ಐದು ದಶಕಗಳಿಂದಲೂ ಹೆಚ್ಚು ಕಾಲ ಸೇವೆ ಸಲ್ಲಿಸುತ್ತಿರುವ ರಾಮಣ್ಣ ಅವರು ಮೂಲತಃ ಮಂಡ್ಯ ಜಿಲ್ಲೆಯವರು. ಮದರಾಸಿನ ಪ್ರಸಾದ್ ಸ್ಟುಡಿಯೊದಲ್ಲಿ ಫ್ಲೋರ್ ಇನ್ ಚಾರ್ಜ್ ಮತ್ತು ಟೆಲಿಫೋನ್ ಆಪರೇಟರ್ ಆಗಿ ಕೆಲವು ಕಾಲ ಸೇವೆ ಸಲ್ಲಿಸಿದ ರಾಮಣ್ಣ, 1964ರಲ್ಲಿ ಶಿವಗಂಗಾ ಮಹಾತ್ಮೆ ಚಿತ್ರದ ಮೂಲಕ ನಿರ್ಮಾಣ ನಿರ್ವಾಹಕರಾದರು. ಈ ತನಕ ಇನ್ನೂರಕ್ಕೂ ಹೆಚ್ಚು ಚಿತ್ರಗಳಿಗೆ ಕೆಲಸ ಮಾಡಿದ ಅನುಭವ ಅವರದು.**

**ಕೆ.ಎನ್.ಟೈಲರ್ ಪ್ರಶಸ್ತಿ (ಪ್ರಾದೇಶಿಕ ಚಿತ್ರ)**

**ರಾಮ್ ಶೆಟ್ಟಿ**

ಮೂಲತಃ ಮಂಗಳೂರಿನವರಾದ ರಾಮ್‌ಶೆಟ್ಟಿ ಸಾಹಸ ಸಂಯೋಜಕರಾಗಿ ಭಾರತೀಯ ಚಿತ್ರರಂಗದಲ್ಲಿ ಚಿರಪರಿಚಿತರು. ಹಿಂದಿ ಮೊದಲ್ಗೊಂಡು ಎಲ್ಲ ಬಹುತೇಕ ಎಲ್ಲ ಭಾರತೀಯ ಭಾಷೆಯ ಚಿತ್ರಗಳಿಗೆ ಸಾಹಸ ಸಂಯೋಜಿಸಿ ಖ್ಯಾತರಾಗಿರುವ ರಾಂ ಶೆಟ್ಟಿ ಅವರ ಈ ಸಾಹಸದ ಚಿತ್ರಗಳ ಸಂಖ್ಯೆ 750ಕ್ಕೂ ಹೆಚ್ಚು. ಕನ್ನಡದಲ್ಲೂ ಅವರ ಸಾಹಸ ಇದೆ. ತಮ್ಮ ಮಾತೃಭಾಷೆಯಾದ ತುಳುವಿನಲ್ಲಿ ಅವರು ಚಿತ್ರಗಳನ್ನು ನಿರ್ಮಿಸಿದ್ದಾರೆ, ನಿರ್ದೇಶಿಸಿದ್ದಾರೆ, ನಟಿಸಿದ್ದಾರೆ. 80ರ ದಶಕದಲ್ಲಿ ಆನಂದ ಫಿಲ್ಮ್ ಕಂಬೈನ್ಸ್ ಎಂಬ ನಿರ್ಮಾಣ ಸಂಸ್ಥೆಯನ್ನು ಕಟ್ಟಿ 'ಬದ್ಕೆರೆ ಬುಡ್ಲೆ' (1982) ಎಂಬ ತುಳು ಚಿತ್ರ ನಿರ್ಮಿಸಿದ ಅವರ ನಿರ್ಮಾಣದ ಚಿತ್ರಗಳಲ್ಲಿ ದಾರೆದ ಸೀರೆ (1983), ಬಂಗಾರ್ದ ಕುರಲ್(2012), ಸೂಪರ್ ಮರ್ಮಯೆ (2015) ಸೇರಿವೆ. ದಾರೆದ ಸೀರೆ, ಬಂಗಾರ್ದ ಕುರಲ್, ಸೂಪರ್ ಮರ್ಮಯೆ ಅವರ ನಿರ್ಮಾಣದ ಚಿತ್ರಗಳು.